


# ಛಾಯಾಚಿತ್ರಗಳಲ್ಲಿ ಸ್ವಾಮಿ ವಿವೇಕಾನಂದರು

ಕೆ. ಆರ್. ಮೋಹನ್

### ಛಾಯಾಚಿತ್ರ ೭೬

**ಸ್ವಾ**ಮಿ ವಿವೇಕಾನಂದರು ಮತ್ತು ಸ್ವಾಮಿ ತುರೀಯಾನಂದರು ೧೮೯೯, ಜೂನ್ ೨೦ರಂದು ಪಶ್ಚಿಮ ದೇಶಗಳಿಗೆ ಹೊರಡುವುದು ಎಂದು ನಿಶ್ಚಯವಾಯಿತು. ಜೂನ್ ೧೯ರಂದು ಬೇಲೂರು ಮಠದಲ್ಲಿ ಸ್ವಾಮಿಗಳಿಬ್ಬರಿಗೂ ಬೀಳ್ಕೊಡುಗೆಯ ಸಮಾರಂಭವನ್ನು ನಡೆಸಲಾಯಿತು. ಸೋದರಸಂನ್ಯಾಸಿಗಳೆಲ್ಲರೂ ಇಬ್ಬರಿಗೂ ಶುಭಹಾರೈಸಿದರು. ಆ ಸಂದರ್ಭದಲ್ಲಿ ತೆಗೆದ ಎರಡನೆಯ ಚಿತ್ರ ಇದು. [ಮೊದಲನೆಯ ಚಿತ್ರವನ್ನು ಕಳೆದ ಸಂಚಿಕೆಯಲ್ಲಿ ಮುದ್ರಿಸಲಾಗಿದೆ (ಛಾಯಾಚಿತ್ರ – ೭೫).]


ಛಾಯಾಚಿತ್ರ ೭೬

ಈ ಸಂದರ್ಭದಲ್ಲಿ ಸ್ವಾಮಿ ಶಾರದಾನಂದರು, ಸ್ವಾಮಿ ಅಖಂಡಾನಂದರು ಮತ್ತು ಸ್ವಾಮಿ ತ್ರಿಗುಣಾತೀತಾನಂದರು ಭಾಷಣ ಮಾಡಿದರು. ಸ್ವಾಮಿ ತುರೀಯಾನಂದರು ಶುಭ ಹಾರೈಕೆಗಳಿಗೆ ಉತ್ತರವಾಗಿ ಸೂಕ್ತವಾದ ಮಾತುಗಳನ್ನು ಆಡಿದರು. ಬಳಿಕ ಸ್ವಾಮಿ ವಿವೇಕಾನಂದರು **'ಸಂನ್ಯಾಸ – ಅದರ ಪಾತ್ರ ಮತ್ತು ಅನುಷ್ಠಾನ'** ಎಂಬ ವಿಷಯವಾಗಿ ಉಜ್ವಲವಾದ ಪ್ರವಚನವನ್ನು ಮಾಡಿದರು.

ಸ್ವಾಮಿ ವಿರಜಾನಂದರು ತಮ್ಮ ಪ್ರೀತಿಯ ಗುರುವಾದ ಸ್ವಾಮಿ ವಿವೇಕಾನಂದರಿಗೆ ಆಹಾರ ತಯಾರಿಸುವುದರಲ್ಲಿ ನಿರತರಾಗಿದ್ದರು. ಫೋಟೋ ತೆಗೆಯುವ ಸಮಯದಲ್ಲಿ ಅವರನ್ನು ಕರೆಯಲಾಯಿತು. ಅವರಿಗೆ ಬಟ್ಟೆ ಧರಿಸಲು ಕಾಲಾವಕಾಶವಿಲ್ಲದ್ದ ಕಾರಣ, ಅವರು ಬರಿಮೈಯಲ್ಲಿ ಕಾಣಿಸಿಕೊಂಡಿದ್ದಾರೆ.

### ಛಾಯಾಚಿತ್ರ ೭೭

ಸ್ವಾಮಿ ವಿವೇಕಾನಂದರು ಎರಡನೆಯ ಬಾರಿ ವಿದೇಶ ಪ್ರಯಾಣಮಾಡುವ ಸಂದರ್ಭದಲ್ಲಿ ಎರಡು ಸಾಮೂಹಿಕ ಚಿತ್ರಗಳನ್ನು ತೆಗೆಯಲಾಯಿತು (ಛಾಯಾಚಿತ್ರಗಳು – ೭೫, ೭೬). ಹಾಗೆಯೇ ಅವರದೇ ಒಂದು ಫೋಟೋವನ್ನು ಪ್ರತ್ಯೇಕವಾಗಿ ಸೆರೆಹಿಡಿಯಲಾಯಿತು. ಇದರಲ್ಲಿ ಸ್ವಾಮೀಜಿ ಅಷ್ಟೇನೂ ಆರೋಗ್ಯವಂತರಾಗಿ ಕಾಣುವುದಿಲ್ಲ. ಸ್ವಾಮೀಜಿಯವರನ್ನು ಇಂಗ್ಲೆಂಡಿನಲ್ಲಿ ಸ್ವಾಗತಿಸಲು ಬಂದಿದ್ದ ಶ್ರೀಮತಿ ಫಂಕಿ ಹೇಳುತ್ತಾಳೆ, "ಸ್ವಾಮೀಜಿ ತುಂಬ ಇಳಿದುಹೋಗಿದ್ದರು; ಒಬ್ಬ ಹುಡುಗನಂತೆ ಆಗಿಬಿಟ್ಟಿದ್ದರು" ಎಂದು. ಆದರೆ ೪೨ ದಿನಗಳ ದೀರ್ಘ ಸಮುದ್ರಯಾನದಿಂದ ಸ್ವಾಮೀಜಿಯವರ ಆರೋಗ್ಯ ಬಹುಪಾಲಿಗೆ ಸುಧಾರಿಸಿತ್ತು. ಶಕ್ತಿ, ಉತ್ಸಾಹಗಳು ಬಹುಮಟ್ಟಿಗೆ ಅವರ ವ್ಯಕ್ತಿತ್ವದಲ್ಲಿ ಮತ್ತೆ ಮೂಡಿಬಂದಿದ್ದವು.



ಛಾಯಾಚಿತ್ರ ೭೭

# ಉದ್ದಾಲಕ

**ಕಥೆ :** ಶಕ್ತಿ ವಿಸ್ಮಣಿ **ಚಿತ್ರ :** ಶಂಕರ್


**1** ಸರಸ್ವತಿ ನದಿಯ ದಡದಲ್ಲಿ ಒಂದು ಸುಂದರವಾದ ಹಳ್ಳಿ ಇತ್ತು. ಅಲ್ಲಿ ಉದ್ದಾಲಕನು ವಾಸಿಸುತ್ತಿದ್ದನು. ಅವನು ಭಗವಾನ್ ವಿಷ್ಣುವಿನ ಪರಮಭಕ್ತ. ಹಾಗೆಯೇ ಅವನು ಭಗವಂತನ ಸಂಗಾತಿಯಾದ ದೇವಿಯನ್ನು 'ರಾಧಾ' ಎಂದು ಪೂಜಿಸುತ್ತಿದ್ದನು.

**2** ಒಂದು ದಿನ ನದಿಯ ದಡದಲ್ಲಿ ಹುಡುಗಿಯೊಬ್ಬಳು ಬಟ್ಟೆ ಒಗೆಯುತ್ತಿದ್ದಳು. ಆಗ ಅವಳು ಆ ದಾರಿಯಲ್ಲಿ ಹೋಗುತ್ತಿದ್ದ ಒಬ್ಬ ಬಳೆ ಮಾರುವವನನ್ನು ಕಂಡು, ಕೂಗಿ ಕರೆದಳು.




**2** ತಾನು ಬಯಸಿದ ಬಳೆಗಳನ್ನು ಆಕೆ ಕೊಂಡುಕೊಂಡಳು.











ಹುಡುಗಿಯ ಶುಭಲಕ್ಷಣಗಳನ್ನು ನೋಡಿ, ಬಳೆಗಾರ ಅವಳನ್ನು ನಂಬಿದ.

ಆಕೆ ಹೇಳಿದ್ದಕ್ಕೆ ಒಪ್ಪಿಕೊಂಡ.

**6** ಬಳೆಗಾರ ಉದ್ದಾಲಕರ ಮನೆಗೆ ಹೋದನು.




**7** ಬಳೆಗಾರ ಹೇಳಿದ್ದನ್ನು ಕೇಳಿ ಉದ್ದಾಲಕನಿಗೆ ಆಶ್ಚರ್ಯವಾಯಿತು.




**8** ಬೇಜಾರು ಮಾಡಿಕೊಂಡಿದ್ದ ಉದ್ದಾಲಕರಿಗೆ ಬಳೆಗಾರ ನೆನಪು ಮಾಡಿದನು.

